ಅ) 92

ಆ) ಕೇಂದ್ರ ಸರ್ಕಾರದ ನೆರವು 16 ಕ್ರೀಡಾಂಗಣಗಳಿಗೆ ಪಡೆಯಲಾಗಿದೆ.

ಇ) ಹೌದು.

ಈ) ಕಳುಹಿಸಿಕೊಡಲು ಸಾಧ್ಯವಾಗುವುದಿಲ್ಲ. ಏಕೆಂದರೆ, ಕೇಂದ್ರ ಸರ್ಕಾರದವರು ನಿಗಧಿಪಡಿಸಿರುವ ಅವಧಿ ಮುಗಿದಿರುವ ಕಾರಣ ಈಗ ಕಳುಹಿಸಿದರೆ ತಿರಸ್ಕೃತವಾಗುತ್ತದೆ.

ಉ) ಇಲ್ಲ.

ಊ) ಕೇಂದ್ರ ಸರ್ಕಾರದ ಅನುದಾನ ಪಡೆಯಲು ಪ್ರಸ್ತಾವನೆ ಪುನಃ ಕಳುಹಿಸಲು ಕ್ರಮ ಕೈಗೊಳ್ಳಲಾಗುವುದು.

ರಾಣೆಬೆನ್ನೂರು ಮತ್ತು ಹಾವೇರಿ ನಗರಗಳ ಬೈಪಾಸ್ ರಸ್ತೆ.

1527(2175)

ಶ್ರೀ ಕೋಳಿವಾಡ್ ಕೃಷ್ಣಪ್ಪ . ಭೀಮಪ್ಪ (ರಾಣೆಬೆನ್ನೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ಮತ್ತು ಹಾವೇರಿ ನಗರಗಳ ಬೈಪಾಸ್ ರಸ್ತೆಯನ್ನು ಜೂನ್ ತಿಂಗಳಿನಿಂದ ಪ್ರಾರಂಭಿಸಲಾಗುವುದೆಂದು ಸದನದಲ್ಲಿ ಹೇಳಿಕೆ ಕೊಟ್ಟಿದ್ದು, ಇಲ್ಲಿಯವರೆಗೂ ಪ್ರಾರಂಭ ಆಗದಿರಲು ಕಾರಣಗಳೇನು?

ಆ) ಯಾವ ತಿಂಗಳಿನಿಂದ ಈ ಕೆಲಸವನ್ನು ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಪ್ರಸ್ತುತ ಬೈಪಾಸ್ ರಸ್ತೆಗಳನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಯೋಜನೆಯಲ್ಲಿ ಅಭಿವೃದ್ಧಿಪಡಿಸಲು ಭಾರತೀಯ ಹೆದ್ದಾರಿ ಪ್ರಾಧಿಕಾರ, ದೆಹಲಿ ಯೋಜಿಸಿದ್ದು, ವಿದೇಶಿ ನೆರವಿನ ಯೋಜನೆಗೆ ವಿಧಾನಗಳನ್ನು ಇನ್ನೂ ತಯಾರಿಸಲಾಗುತ್ತಿರುವುದರಿಂದ ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುವುದಿಲ್ಲ.

ಆ) ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಅನುಮೋದನೆ ದೊರೆತ ನಂತರ, ಹಾಗೂ ಗುತ್ತಿಗೆಗಳನ್ನು ನಿಗಧಿ ಮಾಡಿದ ನಂತರ ಡಿಸೆಂಬರ್ 2001ರಲ್ಲಿ ಕೆಲಸ ಪ್ರಾರಂಭಿಸಲು ಪ್ರಾಧಿಕಾರವು ಯೋಜಿಸಿದೆ.